## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 235/2023

**ಸಾಕ್ಷಿಯನ್ನು ದಿಃ 15.12.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಆಂತೋಣಿ ಮಿಲ್ಟನ್ | ಸಿಡಬ್ಲ್ಯೂಃ 6 | ಪಿಡಬ್ಲ್ಯೂಃ 6 |
| ತಂದೆಯ ಹೆಸರು | ಫ್ರಾನ್ಸಿಸ್ ಫರ್ನಾಂಡಿಸ್ | | |
| ವಯಸ್ಸು | 36 ವರ್ಷ | | |
| ಕೆಲಸ | ಸಿವಿಲ್ ಗುತ್ತಿಗೆದಾರ | | |
| ವಾಸಸ್ಥಳ | ಉದಯನಗರ, ಹುಣಸೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಸಾಕ್ಷಿ ನಿಪಿ-1ರ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿನಾಂಕಃ 02.02.2023ರಂದು ಚಾಸಾ-2ರವರ ಮನೆಯ ಮುಂದೆ ಮಾಡಿದ್ದೇನೆ. ಅಲ್ಲಿ ಗಲಾಟೆಯ ಸಂಬಂಧ ಪೋಲಿಸರು ಮಹಜರು ಮಾಡುತ್ತಿದ್ದರು. ಚಾಸಾ-2ರವರು ಹಾಜರಿದ್ದು, ಘಟನಾ ಸ್ಥಳವನ್ನು ತೋರಿಸಿದರು. ನನ್ನ ಜೊತೆ ಚಾಸಾ-7 ರವರು ಹಾಜರಿದ್ದರು. ನಿಪಿ-1ರ ಮಹಜರನ್ನು ಬೆಳಿಗ್ಗೆ 9 ರಿಂದ 10 ಗಂಟೆಯವರೆಗೆ ಮಾಡಿದರು. ನನ್ನ ಸಮಕ್ಷಮ ಎರಡು ಬಟ್ಟೆಗಳನ್ನು ಅಮಾನತುಪಡಿಸಿಕೊಂಡರು ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾ-1 ಮತ್ತು 2ನ್ನು ನೋಡಿ ಗುರುತಿಸುತ್ತಾರೆ. ನಿಪಿ-1ರ ಮಹಜರು ಕಾಲಕ್ಕೆ ನಿಪಿ-2 ಮತ್ತು 3ರ ಬಾವಚಿತ್ರಗಳನ್ನು ತೆಗೆಯಲಾಗಿದೆ. ಅದರಲ್ಲಿ ನಾನಿದ್ದೇನೆ. ನಿಪಿ-1 ರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿದೆ. ನಾನು ನಿಪಿ-1ನ್ನು ಓದಿ ತಿಳಿದು ಸಹಿ ಮಾಡಿದ್ದೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ VSD ವಕೀಲರಿಂದಃ**

ಪೋಲಿಸರು ಬೆಳಿಗ್ಗೆ 9 ರಿಂದ 10 ಗಂಟೆಗೆ ಸ್ಥಳ ಪರಿಶೀಲನೆ ಮಾಡಿದರು. ನಾನು ಚಾಸಾ-2 ಮತ್ತು 4 ರವರ ಕೋರಿಕೆಯ ಮೇರೆಗೆ ಮಹಜರಿಗೆ ಸಹಿ ಹಾಕಿದ್ದೇನೆ ಎಂದರೆ ಪೋಲಿಸರು

ಮಹಜರಿಗೆ ಬಂದಾಗ ಸಹಿ ಹಾಕಿದ್ದೇನೆ. ಗಲಾಟೆಯಾದ ವಿಚಾರದಲ್ಲಿ ಪೋಲಿಸರು ಮಹಜರು ಮಾಡಲು ಬಂದಿದ್ದರು. ಮಹಜರು ಸಮಯದಲ್ಲಿ ಹಾಜರಿದ್ದ ಪೋಲಿಸರ ಹೆಸರು ಹೇಳಲು ಆಗುವುದಿಲ್ಲ. ನಾನು ಚಾಸಾ-2 ರವರ ಪಕ್ಕದ ಮನೆಯಲ್ಲಿ ವಾಸವಿಲ್ಲ ಎಂದರೆ ಸರಿಯಲ್ಲ. ನಾನು ಮಹಜರಿಗೆ ಸ್ಥಳದಲ್ಲಿ ಸಹಿ ಹಾಕಿಲ್ಲ ಎಂದರೆ ಸರಿಯಲ್ಲ. ಚಾಸಾ-2 ಮತ್ತು 4 ರವರು ನನ್ನನ್ನು ಕರೆದುಕೊಂಡು ಹೋಗಿ ಸಹಿ ಹಾಕಿಸಿದ್ದಾರೆ ಎಂದರೆ ಸರಿಯಲ್ಲ. ಮಹಜರು ಸಮಯದಲ್ಲಿ ನಾನು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ1 ರಿಂದ 4 ರವರಿಗೆ ಅನುಕೂಲವಾಗಲೀ ಎಂದು ಮಹಜರಿಗೆ ಸಹಿ ಹಾಕಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.